ವರ್ಷಗಳು ಕಳೆದವು. ನನ್ನ ವಿದ್ಯಾಭ್ಯಾಸವೂ ಮುಂದುವರಿದಿತ್ತು; ಕಲಿಕೆಯನ್ನೂ, ಅರಿವಿನ ವ್ಯಾಪ್ತಿಯನ್ನೂ ಹರಡುತ್ತ ಹೋದೆ. ಅದರಿಂದ ಪ್ರಪಂಚದ ಆಗುಹೋಗುಗಳ ಬಗ್ಗೆ, ರಾಜಕೀಯ ವಿದ್ಯಮಾನಗಳ ಬಗ್ಗೆ ವಿಶದವಾಗಿ ತಿಳಿಯತೊಡಗಿತು. ಜರ್ಮನ್ನರ ಯುದ್ಧಶಕ್ತಿ, ಹಿಟ್ಲರ್ ಮತ್ತು ಹಿಮ್ಲರ್ ಮುಂತಾದವರ ತಂತ್ರಗಳು, ಅವರ ದುರಂತ ಅಂತ್ಯ ಎಲ್ಲವುಗಳ ಬಗ್ಗೆ ಅರಿವಾಗತೊಡಗಿತ್ತು. ನನ್ನ ಆಸಕ್ತಿಯನ್ನೂ, ಹಲವು ಸಂದರ್ಭಗಳಲ್ಲಿ ನಾನು ಮಂಡಿಸುತ್ತಿದ್ದ ತಾತ್ವಿಕ ಚರ್ಚೆಗಳನ್ನೂ ಮೆಚ್ಚತೊಡಗಿದ ಗುರುಗಳು ಪ್ರಪಂಚದ ಹಲವು ರಾಜಕೀಯ ಕ್ಲಿಷ್ಟತೆಗಳ ಬಗ್ಗೆ ತಿಳಿಸತೊಡಗಿದರು. ವಿಹಾರದ ವಿದ್ಯಮಾನಗಳಲ್ಲಿ ಹೆಚ್ಚು ಹೆಚ್ಚಾಗಿ ತೊಡಗಿಸಿಕೊಂಡಂತೆ, ನನ್ನನ್ನು ಮೊದಲಿಗೆ ಗುರುಗಳು ಪರಿಚಯ ಮಾಡಿಸಿದ್ದ, ನನಗೆ ಕೈಮುಗಿದಿದ್ದ ವ್ಯಕ್ತಿಯ ಬಗ್ಗೆ ಮತ್ತಷ್ಟು ವಿವರಗಳು ತಿಳಿದವು. ಆಶ್ಚರ್ಯವೆಂದರೆ, ಆತ ಗುರುಗಳಿಗೆ ಆಂಗ್ಲ ಭಾಷೆ ಮತ್ತು ಕೆಲವು ಪಾಶ್ಚಾತ್ಯ ವಿಷಯಗಳ ಬಗ್ಗೆ ಪಾಠ ಮಾಡುತ್ತಿದ್ದ ಎಂದು ತಿಳಿಯಿತು. ನಾನು ಇಲ್ಲಿಗೆ ಬಂದ ದಿನಗಳಿಂದ ಸುಮಾರು ಆರೇಳು ವರ್ಷಗಳ ಕಾಲ ವಿಹಾರದಲ್ಲಿಯೆ ತಂಗಿದ್ದ. ಬರಬರುತ್ತ ಗುರುಗಳೆ ಕೆಲವು ರಹಸ್ಯಗಳನ್ನು ನನ್ನಲ್ಲಿ ತೆರೆದಿಟ್ಟಂತೆ ಆತನ ಬಗ್ಗೆ ತಿಳಿಯತೊಡಗಿತು.

ಆತನ ಹೆಸರು ಹೈನ್ರಿಚ್ ಹೆರರ್ ಎಂದು. ಮೂಲತಃ ಆಸ್ಟ್ರಿಯ ದೇಶದವನು. ಸ್ಕಾಫರ್ ತಂಡ ಹಿಂದಿರುಗಿದ ಒಂದು ವರ್ಷದ ನಂತರ ಹಿಮಾಲಯದ ನಾಂಗ್ಪಾದ ಪರ್ವತ ಹತ್ತಲು ಸುಲಭದ ಹಾದಿ ಹುಡುಕಲೆಂದು ಹೊರಟಿದ್ದ ಒಂದು ತಂಡದ ಸದಸ್ಯನಾಗಿ ಸೇರುತ್ತಾನೆ. ಆಫ್ ಸ್ಕೈಟರ್ ಎಂಬ ಪರ್ವತಾರೋಹಿಯ ಮುಖಂಡತ್ವದಲ್ಲಿ ಹೊರಟ ಈ ತಂಡದವರು ಡಯಾಮಿರ್ ಮುಖದ ಕಡೆಯಿಂದ ಆ ಪರ್ವತ ಹತ್ತುತ್ತಾರೆ. ಈ ಇಬ್ಬರೂ ಸಹ SS ನಾಜಿ ಪಂಥದ ಸದಸ್ಯರು. ಅವರಿಗೂ ಸಹ ತಮ್ಮ ಮೂಲ ಉದ್ದೇಶದ ಜೊತೆಗೆ ಮತ್ತೊಂದು ರಹಸ್ಯ ಕಾರ್ಯಾಚರಣೆಯ ಕರ್ತವ್ಯವನ್ನೂ ಒಪ್ಪಿಸಲಾಗಿರುತ್ತದೆ. ಈ ಕಾಲಘಟ್ಟದಿಂದ ತಿರುಗಿ ನೋಡಿದರೆ, ಹೈನ್ರಿಚ್ ಹೆರರ್ ಅವರ ಪರ್ವತಾರೋಹಣ ಒಂದು ಮುಖವಾಡವಷ್ಟೆ. ಅವರ ಪ್ರಮುಖ ಉದ್ದೇಶವಿದ್ದದ್ದು ಕಾಶ್ಮೀರದ ಒಂದು ಕಡೆಯಿಂದ ಹತ್ತು ಹೆಂಗಸರನ್ನೂ ಅವರ ಮಕ್ಕಳನ್ನೂ ಜರ್ಮನಿಗೆ ಕರೆದೊಯ್ಯುವುದು. ಆಗ ಬ್ರಿಟಿಷ್ ಆಡಳಿತ ಅಫ್ಘಾನಿಸ್ತಾನದವರೆಗೆ ಹಬ್ಬಿರಲಿಲ್ಲವಾದ್ದರಿಂದ. ಅವರನ್ನು ಕರಾಚಿಗೆ ಕರೆತಂದು ಅಲ್ಲಿಂದ ಅಫ್ಘನ್ ಗಡಿ ದಾಟಿಸಲು ಅಥವಾ ಸಮುದ್ರದ ಮೂಲಕ ಜರ್ಮನಿಯ ಹಡಗುಗಳಲ್ಲಿ ಸಾಗಿಸಲು ಯೋಜಿಸಲಾಗಿರುತ್ತದೆ. ಆದರೆ ಹೇಗೋ ಈ ತಂಡ ಯಾವುದೋ ರಹಸ್ಯ ಕಾರ್ಯಾಚರಣೆಯಲ್ಲಿ ತೊಡಗಿದೆಯೆಂದು ಬ್ರಿಟಿಷ್ ಆಡಳಿತಕ್ಕೆ ತಿಳಿದುಹೋಗಿ ಕರಾಚಿಯಲ್ಲಿ ಅವರನ್ನು ಬಂಧಿಸುತ್ತಾರೆ. ಅವರು ಬಂಧನಕ್ಕೊಳಗಾದ ತಕ್ಷಣವೆ ದಾಹ್‌ನಿಂದ ನಮ್ಮನ್ನು ಕರೆತರುವ ಕಾರ್ಯಾಚರಣೆಯನ್ನು ಕೈಬಿಡಲಾಗಿರುತ್ತದೆ. ಇದರ ಸುದ್ದಿ ನಮ್ಮನ್ನು ಅದುವರೆಗೆ ಸುರಕ್ಷಿತವಾಗಿ ನೋಡಿಕೊಳ್ಳುತ್ತಿದ್ದ ಸ್ಥಳೀಯ ವ್ಯವಸ್ಥಾಪಕರಿಗೂ ತಿಳಿದೇ ನಮಗೆ ಹಿಂದಿರುಗಲು ಸೂಚಿಸಿದ್ದು.

ಹೈನ್ರಿಚ್ ಹೆರರ್ ತಂಡವನ್ನು ಬಂಧಿಸಿ ಅವರನ್ನು ಹಲವಾರು ಕಡೆಗೆ ಸಾಗಿಸಲಾಗುತ್ತದೆ. ಆದರೆ ಹೈನ್ರಿಚ್ ಹೆರರ್ ತಪ್ಪಿಸಿಕೊಳ್ಳುತ್ತಾರೆ. ಮತ್ತೆ ಬಂಧನಕ್ಕೊಳಗಾಗುತ್ತಾರೆ. ಹೀಗೆ ಮೂರು ಬಾರಿ ಬಂಧಿಸಲ್ಪಟ್ಟು ನಾಲ್ಕನೆಯ ಬಾರಿ ತಪ್ಪಿಸಿಕೊಂಡು ಲಾಸಾಗೆ ಬಂದು ಸರ್ಕಾರದ ಆಶ್ರಯ ಪಡೆಯುತ್ತಾರೆ. ಆ ಯುದ್ಧ ಸಮಯದಲ್ಲಿ ಸ್ವದೇಶಕ್ಕೆ ಹೋಗುವುದು ಕಷ್ಟ ಹಾಗೂ